# 1ನೇ ತರಗತಿ, ಕನ್ನಡ– 11ನೇ ಮೈಲಿಗಲ್ಲು

## 11. ಚಿತ್ರವನ್ನು ಹೆಸರಿಸು 186

ನವಿಲು, ಗುಲಾಬಿ, ಬುಗುರಿ, ಮೀನು






## 11. ಸ್ವರ ಚಿಹ್ನೆ ಪರಿಚಯ 187

ಉ



| | | | |
|---|---|---|---|
| ರು | ಗು | ಸು | ದು |
| ಜು | ವು | ಮು | ಬು |
| ನು | ಪು | ಯು | ಡು |
| ಟು | ಚು | ಲು | ಷು |
| ಕು | ತು | ಳು | ಣು |
| ಛು | ಹು | ಶು | |

## 11. ಅಭ್ಯಾಸ ಪುಸ್ತಕ (ಅಕ್ಷರ/ಪದ ನೋಡಿ ಬರೆ) 188

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 188 ನ್ನು ಪೂರ್ಣಗೊಳಿಸುವುದು.

## 11. ಚಿತ್ರಪದ ಮತ್ತು ಸಾಧನಾ ಪದಗಳು 191

| | | | |
|---|---|---|---|
| ಮೀನು | ಶುಚಿ | ಕಡುಬು | ಗುಟುಕು |
| ಬುಗುರಿ | ಗುಣ | ಬಾವುಟ | ಕುಣಿತ |
| ನವಿಲು | ಸುರಿ | ನುಣುಪು | ಯುಗಾದಿ |
| ಗುಲಾಬಿ | ಸುಮ | ಜುಮುಕಿ | ಚುರುಕು |
| ಹುಳು | ಮುರಿ | ಮುಗಿಲು | ಕುರಿಮರಿ |
| ದುಡಿ | ಪುರಿ | ಕನಸು | ಚುರುಮುರಿ |

ಸೂಚನೆ: ಈ ಪದಗಳನ್ನು ಓದಲು ಕಲಿತು ನೋಟ್ ಪುಸ್ತಕದಲ್ಲಿ ಬರೆದು ಅಭ್ಯಾಸ ಮಾಡುವುದು.

## 11. ಚಿತ್ರ ಸಹಿತ ವಾಕ್ಯ 192



ಗುರುಗಳು ಹಾಡನು ಹಾಡುವರು
ಹುಡುಗಿಯರು ನಲಿಯುತ ಕಲಿಯುವರು
ಆಡುತ ಹಾಡುತ ನಲಿಯುವರು



ಜುಳು ಜುಳು ಹರಿಯುವ ನದಿ
ನದಿಯ ಬಳಿ ಋಷಿಯ ಕುಟೀರ.
ಋಷಿಯು ನದಿಯಲಿ ಜಳಕವ ಮಾಡಿ ಶುಚಿಯಾಗುವರು.
ಶುಚಿಯಾದ ಅವರು ಕುಳಿತು ಜಪ ಮಾಡುವರು.

ಸೂಚನೆ: ಈ ವಾಕ್ಯಗಳನ್ನು ಓದಲು ಕಲಿತು ನೋಟ್ ಪುಸ್ತಕದಲ್ಲಿ ಬರೆದು ಅಭ್ಯಾಸ ಮಾಡುವುದು.

## 11. ಅಭ್ಯಾಸ ಪುಸ್ತಕ (ಪದ/ವಾಕ್ಯ ನೋಡಿ ಬರೆ) 193

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 193 ನ್ನು ಪೂರ್ಣಗೊಳಿಸುವುದು.

## 11. ಚಿತ್ರಗಳಿಗೆ ಪದ ಹೊಂದಿಸು 194

| | |
|---|---|
|  | ಹುಲಿ |
|  | ಗುಡಿಸಲು |
|  | ಬಾಗಿಲು |
|  | ಮೀನು |
|  | ಅಳಿಲು |
|  | ನವಿಲು |
|  | ಬುಗುರಿ |
|  | ಜುಮುಕಿ |

## 11. ಅಭ್ಯಾಸ ಪುಸ್ತಕ (ಬಿಟ್ಟ ಅಕ್ಷರ ತುಂಬಿ ಪದ ಬರೆ) 195

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 195 ನ್ನು ಪೂರ್ಣಗೊಳಿಸುವುದು.

## 11. ಮೀನು ಗಾಳ (ವಾಚಕ) 196

ಆಟ ಆಟ
ವೀಣಾ ಸೀನರ ಆಟ
ನದಿಯ ತೀರದ ಆಟ
ಗಾಳ ಹಾಕುವ ಆಟ
ಮೀನು ಹಿಡಿಯುವ ಆಟ
ವೀಣಾ ಹಿಡಿದಳು ಮೀನು

## 11. ಋಷಿ (ವಾಚಕ) 197

ಋಷಿ
ನದಿಯ ತೀರದ ಕುಟೀರ
ಋಷಿ ವಾಸಿಸುವ ಕುಟೀರ
ಗರಿಯ ಛಾವಣಿಯ ಕುಟೀರ
ಬಿದಿರಲಿ ಮಾಡಿದ ಕುಟೀರ
ಋಷಿ ಜಪ ಮಾಡುವ ಕುಟೀರ

## 11. ಕರಡಿಯ ಕುಣಿತ (ವಾಚಕ) 198

ಕರಡಿಯ ಕುಣಿತ
ಕುಣಿತ ಕುಣಿತ ಹಾಡು ಕುಣಿತ
ಹಾಡು ಕುಣಿತ ಟಿ.ವಿ.ಯಲಿ
ಕುಣಿಯಲು ಬಯಸಿತು ಕರಡಿ
ತಿರುಗಿ ತಿರುಗಿ ಆಡಿದ ಕರಡಿ
ತಕತಕ ತಕತಕ ಕುಣಿದ ಕರಡಿ
ಕುಣಿದು ಜಿಗಿದು ನಲಿದ ಕರಡಿ
ಜಿಗಿದು ನಲಿದು ದಣಿದ ಕರಡಿ

## 11. ಬುಗುರಿ (ವಾಚಕ) 199

ಬುಗುರಿ
ಬುಗುರಿ ಬುಗುರಿ ತಿರುಗುವ ಬುಗುರಿ
ಮಾವ ಮಾಡಿದ ಹಳದಿಯ ಬುಗುರಿ
ಹಳದಿಯ ಬುಗುರಿ ರವಿಯ ಬುಗುರಿ
ಬುಗುರಿ ಬುಗುರಿ ತಿರುಗುವ ಬುಗುರಿ
ತಾತ ಮಾಡಿದ ಹಸಿರು ಬುಗುರಿ
ಹಸಿರು ಬುಗುರಿ ವಸೀಮನ ಬುಗುರಿ
ಗರಗರ ಗಿರಿಗಿರಿ ತಿರುಗುವ ಬುಗುರಿ
ಹಳದಿ ಬುಗುರಿ ಯಾರ ಬುಗುರಿ?
ಹಸಿರು ಬುಗುರಿ ಯಾರ ಬುಗುರಿ?